ಕರ್ನಾಟಕ ಸರಕಾರ

# ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ಕಾರ್ಯಾಲಯ

## ಕೋಲಾರ ತಾಲ್ಲೂಕು

ಸಂಖ್ಯೆ: ಅ ಕೊ ಗ್ರಾ ಪಂ/ ಸಿ ಆರ್/01/205/2019–20 ದಿನಾಂಕ : 12/12/2019

## : ಪ್ರಾರಂಭಿಕ ಪ್ರಮಾಣ ಪತ್ರ :

ವಿಷಯ : ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಾಭಿಕೊತ್ತನೂರು ಗ್ರಾಮದ ಸ.ನಂ. 20/1 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿರುವ 2 ಎಕರೆ 16 3/4 ಗುಂಟೆ ಪ್ರದೇಶದಲ್ಲಿ (9,387.60 ಚದರ ಮೀಟರು – ಇ ಖಾತಾ ದಾಖಲೆಯನುಸಾರ) ಗ್ರಾಮ ಪಂಚಾಯತಿ ದಾಖಲೆ ಸಂಖ್ಯೆ 711/762/684 ರ ವಿಸ್ತೀರ್ಣ 9,387.60 ಚದರ ಮೀಟರುಗಳು, ಸ್ವತ್ತಿನ ಸಂಖ್ಯೆ 151900700200620032 ಪ್ರದೇಶದಲ್ಲಿ ಒಟ್ಟು 520 ಘಟಕಗಳನ್ನೊಳಗೊಂಡ ವಸತಿ ಸಮುಚ್ಚಯ ಕಟ್ಟಡವನ್ನು ಆರ್ಥಿಕವಾಗಿ ಹಿಂದುಳಿದ ವರ್ಗದ ಜನಗಳಿಗೋಸ್ಕರ (ಇ.ಡಬ್ಲ್ಯೂಎಸ್) ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ಪಿ ಎಂ ಎ ವೈ) ಯಲ್ಲಿ ನೀಡಲಾಗುವ ವಿಶೇಷ ಸವಲತ್ತುಗಳನ್ನು ಉಪಯೋಗಿಸಿಕೊಂಡು ನಿರ್ಮಾಣ ಮಾಡಲು ಉದ್ದೇಶಿಸಿರುವ ಕೆಳಹಂತ, ನೆಲ ಮತ್ತು 12 ಮೇಲಂತಸ್ತುಗಳನ್ನು ಒಳಗೊಂಡ ವಸತಿ ಸಮುಚ್ಚಯ ಘಟಕಗಳಿಗೆ ವಾಸದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ :

1) ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ , ಇವರ ಅಧಿಕೃತ ಜ್ಞಾಪನದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನಾ ಆದೇಶ ನಂ : ಎ ಎಲ್ ಎನ್. (ಕೋ) ಎಸ್ ಆರ್/64/2018–19, ದಿನಾಂಕ : 24/01/2019.

2) ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ ರವರ ಏಕ ನಿವೇಶನ ವಿನ್ಯಾಸ ನಕ್ಷೆ ಮಂಜೂರಾತಿ ಮತ್ತು ತಾಂತ್ರಿಕ ಅನುಮೋದನೆ ಆದೇಶದ ಸಂಖ್ಯೆ : ನಗ್ರಾಯೋಸನಿಕೋ:ತಾಂ.ಶಾಖೆ:93:ವಿನ್ಯಾಸ:2018–19/1070 ದಿನಾಂಕ : 08/03/2019.

3) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಕೋಲಾರ, ಇವರ ಜ್ಞಾಪನ ಸಂಖ್ಯೆ ತಾಪಂಕೋ/ಸಿಆರ್/ ಕಾನಿಅ/ಆ.ನ.ಮ.ನಿ/01/2019–20 ರ ದಿನಾಂಕ: 09/12/2019

4) ಮೆ. ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ ರವರ ಮನವಿ ಪತ್ರದ ದಿನಾಂಕ : 17/08/2019.

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು.

5) ಗ್ರಾಮ ಪಂಚಾಯತಿ ಕಛೇರಿಗೆ ಪಾವತಿಸಿರುವ ಒಟ್ಟು ಶುಲ್ಕ ರೂ 2,,62,000/- **ಗಳಲ್ಲಿ** ಪ್ರಾರಂಭಿಕ ಪ್ರಮಾಣ ಪತ್ರ ಶುಲ್ಕ ಪಾವತಿ ಬಗ್ಗೆ.

*****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಸತೀಶ್ ಕೋಶಿ, ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ ಯ ಪರವಾಗಿ ನಂ. 5 ಎ ಸಿ –712 5 ನೇ ಅಡ್ಡರಸ್ತೆ ಹೆಚ್ ಆರ್ ಬಿ ಆರ್ ಲೇಔಟ್, ಮೊದಲನೇ ಬ್ಲಾಕ್, ಕಲ್ಯಾಣ ನಗರ ಪೋಸ್ಟ್ , ಬೆಂಗಳೂರು 560043 ಇವರಿಗೆ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಾಭಿಕೊತ್ತನೂರು ಗ್ರಾಮದ ಸ.ನಂ. 20/1 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿರುವ(ಏಕ ನಿವೇಶನ) 2 ಎಕರೆ 16 3/4 ಗುಂಟೆ ಪ್ರದೇಶದಲ್ಲಿ (9,387.60 ಚದರ ಮೀಟರು – ಇ ಖಾತಾ ದಾಖಲೆಯನುಸಾರ) ಗ್ರಾಮ ಪಂಚಾಯತಿ ದಾಖಲೆ ಸಂಖ್ಯೆ 711/762/684 ರ ವಿಸ್ತೀರ್ಣ 9,387.60 ಚದರ ಮೀಟರುಗಳು, ಸ್ವತ್ತಿನ ಸಂಖ್ಯೆ 151900700200620032 ಪ್ರದೇಶದಲ್ಲಿ ಒಟ್ಟು 520 ಘಟಕಗಳನ್ನೊಳಗೊಂಡ ವಸತಿ ಸಮುಚ್ಚಯ ಕಟ್ಟಡವನ್ನು ಆರ್ಥಿಕವಾಗಿ ಹಿಂದುಳಿದ ವರ್ಗದ ಜನಗಳಿಗೋಸ್ಕರ (ಇ.ಡಬ್ಲ್ಯೂಎಸ್) ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ಪಿ ಎಂ ಎ ವೈ) ಯಲ್ಲಿ ನೀಡಲಾಗುವ ವಿಶೇಷ ಸವಲತ್ತುಗಳನ್ನು ಉಪಯೋಗಿಸಿಕೊಂಡು ನಿರ್ಮಾಣ ಮಾಡಲು ಉದ್ದೇಶಿಸಿರುವ ಬ್ಲಾಕ್ ಎ , ಬ್ಲಾಕ್ ಬಿ, ಬ್ಲಾಕ್ ಸಿ ಮತ್ತು ಬ್ಲಾಕ್ ಡಿ ಗಳ ಬಹು ಅಂತಸ್ತು (ಕೆಳಹಂತ, ನೆಲ ಮತ್ತು 12 ಮೇಲಂತಸ್ತುಗಳನ್ನು ಒಳಗೊಂಡ) ವಸತಿ ಸಮುಚ್ಚಯ ಘಟಕಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿ ಗ್ರಾಮ ಪಂಚಾಯತಿ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಅಧಿನಿಯಮ 1961 ರ ಉಪಬಂಧ 15(1) ರನ್ವಯ ಶ್ರೀ ಸತೀಶ್ ಕೋಶಿ, ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ ಯ ಪರವಾಗಿ ನಂ. 5 ಎ ಸಿ –712 5 ನೇ ಅಡ್ಡರಸ್ತೆ ಹೆಚ್ ಆರ್ ಬಿ ಆರ್ ಲೇಔಟ್, ಮೊದಲನೇ ಬ್ಲಾಕ್, ಕಲ್ಯಾಣ ನಗರ ಪೋಸ್ಟ್ , ಬೆಂಗಳೂರು 560043 ಇವರಿಗೆ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಾಭಿಕೊತ್ತನೂರು ಗ್ರಾಮದ ಸ.ನಂ. 20/1 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿರುವ ಏಕ ನಿವೇಶನ ಇ ಖಾತಾ ದಾಖಲೆಯನುಸಾರ ಗ್ರಾಮ ಪಂಚಾಯತಿ ದಾಖಲೆ ಸಂಖ್ಯೆ 711/762/684 ರ ವಿಸ್ತೀರ್ಣ 9,387.60 ಚದರ ಮೀಟರುಗಳು, ಸ್ವತ್ತಿನ ಸಂಖ್ಯೆ 151900700200620032 ಪ್ರದೇಶದಲ್ಲಿ ಒಟ್ಟು 520 ಘಟಕಗಳನ್ನೊಳಗೊಂಡ ವಸತಿ ಸಮುಚ್ಚಯ ಕಟ್ಟಡವನ್ನು ಆರ್ಥಿಕವಾಗಿ ಹಿಂದುಳಿದ ವರ್ಗದ ಜನಗಳಿಗೋಸ್ಕರ (ಇ.ಡಬ್ಲ್ಯೂಎಸ್) ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ಪಿ ಎಂ ಎ ವೈ) ಯಲ್ಲಿ ನೀಡಲಾಗುವ ವಿಶೇಷ ಸವಲತ್ತುಗಳನ್ನು ಉಪಯೋಗಿಸಿಕೊಂಡು ವಾಸದ ಉದ್ದೇಶಕ್ಕೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಹು ಅಂತಸ್ತು (ಕೆಳಹಂತ, ನೆಲ ಮತ್ತು 12 ಮೇಲಂತಸ್ತುಗಳನ್ನು ಒಳಗೊಂಡ) ವಸತಿ ಸಮುಚ್ಚಯ ಘಟಕಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಈ ಕೆಳಕಂಡ ಷರತ್ತುಗೊಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

**ಷರತ್ತುಗಳು:**

1) ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಾಸದ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ಕಟ್ಟಡ ಕಟ್ಟತಕ್ಕದ್ದು.

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

2) ಈ ಪ್ರಾರಂಭಿಕ ಪ್ರಮಾಣ ಪತ್ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಅಧಿನಿಯಮ 1961 ರ ಉಪಬಂಧ 15(1)ರನ್ವಯ ನೀಡಲಾಗಿರುವ ಪ್ರಮಾಣ ಪತ್ರವಾಗಿರುತ್ತದೆ.
3) ಕಟ್ಟಡ ಕಾಮಗಾರಿ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಾಲ ಕಾರ್ಮಿಕರ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದೆ.
4) ಕಟ್ಟಡ ನಿರ್ಮಾಣವು ಜಾರಿಯಲ್ಲಿರುವ ನಿಯಮಾವಳಿಗಳು ಮತ್ತು ಕಟ್ಟಡದ ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
5) ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ ದಿನಾಂದಿಂದ 2 ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೇ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
6) ಕಟ್ಟಡದ ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬಾರದು. ಹಾಗೂ ಏನಾದರೂ ಬದಲಾವಣೆಗಳಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಅನುಮೋದನ ಪಡೆದು ನಿರ್ಮಾಣ ಕಾರ್ಯ ಮುಂದುವರೆಸತಕ್ಕದ್ದು.
7) ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಕಡ್ಡಾಯವಾಗಿ ಇಡತಕ್ಕದ್ದು.
8) ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆಯಲ್ಲಿ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಶೇಖರಣೆ ಮಾಡಬಾರದು.
9) ಕಟ್ಟಡದ ಸುತ್ತ ಸಾಕಷ್ಟು ಗಿಡ ಮರಗಳನ್ನು ಹಾಗೂ ಹಸಿರು ವಲಯ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.
10) ಕಟ್ಟಡ ನಿರ್ಮಾಣದ ಆವರಣದೊಳಗೆ ಮಳೆ ನೀರು ಸಂರಕ್ಷಣಾ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.
11) ನಿರ್ಮಾಣ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಅಥವಾ ನ್ಯಾಯಾಲಯ ಪ್ರಕರಣಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.
12) ಕಟ್ಟಡ ನಿರ್ಮಾಣ ಆವರಣದೊಳಗೆ ಸುರಕ್ಷಿತ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಾಣ ಮಾಡತಕ್ಕದ್ದು.
13) ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಅಗ್ನಿ ಶಾಮಕ, ಕೆಪಿಟಿಸಿಎಲ್/ಬೆಸ್ಕಾಂ , ಎಂ ಒ ಐ ಎಫ್, ಪರಿಸರ ಮಾಲಿನ್ಯ ನಿರ್ಮೂಲನ ಮಂಡಳಿ, ರಾಷ್ಟ್ರೀಯ ಹೆದ್ದಾರಿ ಹಾಗೂ ಅಗತ್ಯವಿದ್ದಲ್ಲಿ ಇತರೆ ಸಂಬಂಧಪಟ್ಟ ಇಲಾಖೆಗಳಿಂದ ಅಗತ್ಯ ಪೂರ್ವಾನುಮೋದನೆ/ನಿರಾಕ್ಷೇಪಣಾ ಪತ್ರ/ತಾಂತ್ರಿಕ ಅನುಮೋದನೆಗಳನ್ನು ಪಡೆಯತಕ್ಕದ್ದು.
14) ಕಟ್ಟಡ ನಿರ್ಮಾಣದ ಆವರಣದೊಳಗೆ ನಾಲ್ಕು ಚಕ್ರ ಹಾಗೂ ದ್ವಿಚಕ್ರ ವಾಹನಗಳ ನಿಲುಗಡೆಗೆ ಕಾಲ ಕಾಲಕ್ಕೆ ಇರುವ ನಿಯಮಾವಳಿಗಳ ಪ್ರಕಾರ ಅಗತ್ಯ ಸ್ಥಳಾವಕಾಶ ಇರುವಂತೆ ನೋಡಿಕೊಳ್ಳತಕ್ಕದ್ದು.
15) ಕಟ್ಟಡ ನಿರ್ಮಾಣದ ಆವರಣದೊಳಗೆ ಸೃಜನೆಯಾಗುವ ತ್ಯಾಜ್ಯ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.
16) ಕಟ್ಟಡ ನಿರ್ಮಾಣ ಸಂಧರ್ಭದಲ್ಲಿ ಕಾರ್ಮಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.
17) ಕಟ್ಟಡ ನಿರ್ಮಾಣ ಕಾರ್ಯವನ್ನು ನೈಪುಣ್ಯತೆ ಹೊಂದಿದ್ದ ಅಭಿಯಂತರರ ಮೇಲ್ವಿಚಾರಣೆಯಲ್ಲಿಯೇ ಕೈಗೊಳ್ಳತಕ್ಕದ್ದು.
18) ಕಟ್ಟಡ ನಿರ್ಮಾಣಕ್ಕೆ ಭೂ ಕಂಪ ನಿರೋಧಕ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.
19) ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವ ಕಾರ್ಮಿಕರಿಗೆ ಅಗತ್ಯ ಶೌಚಾಲಯ ವ್ಯವಸ್ಥೆ ಇರುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ಸುತ್ತಲಿನ ಪರಿಸರ ಹಾಳಾಗದಂತೆ ಎಚ್ಚರ ವಹಿಸತಕ್ಕದ್ದು.
20) ಕಟ್ಟಡ ನಿರ್ಮಾಣ ನಕ್ಷೆ ಮಂಜೂರಾತಿ ಪಡೆಯಲು ನೀವುಗಳು ತಪ್ಪು ಮಾಹಿತಿ ದಾಖಲೆಗಳನ್ನು ನೀಡಿರುವುದು ಕಂಡುಬಂದರೆ ಈ ಮಂಜೂರಾಗಿ ಆದೇಶವು ಸ್ವಯಂ ರದ್ದಾಗುತ್ತದೆ ಎಂದು ತಿಳಿಯತಕ್ಕದ್ದು.

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

21) ಗ್ರಾಮ ಪಂಚಾಯತಿಗೆ ಪಾವತಿಸಬೇಕಾದ ಶುಲ್ಕಗಳನ್ನು ಕಾಲಕಾಲಕ್ಕೆ ಹಾಗೂ ಪಂಚಾಯತಿಯು ನಿಗಧಿಪಡಿಸಿದ ತೆರಿಗೆ ಮೊತ್ತವನ್ನು ಪಾವತಿಸಿ ರಸೀದಿ ಪಡೆಯತಕ್ಕದ್ದು.

22) ಕಾರ್ಮಿಕ ಇಲಾಖೆಯ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಮತ್ತು ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರು ದಿನಾಂಕ 04/03/2006 ರಂದು ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

23) ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿಯ ಶೇಕಡ ಒಂದರಷ್ಟು ಮೊತ್ತವನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸಲು ಗ್ರಾಮ ಪಂಚಾಯತ್ ಕಛೇರಿಗೆ ಪಾವತಿಸಲು ರಸೀದಿ ಪಡೆದು ಕಾಮಗಾರಿ ಪ್ರಾರಂಭಿಸತಕ್ಕದ್ದು.

24) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಗ್ರಾಮ ಪಂಚಾಯತಿ ಕಚೇರಿಯಾಗಲೀ, ತಾಲ್ಲೂಕು ಪಂಚಾಯತಿ ಕಛೇರಿಯಾಗಲೀ ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಸಂಪೂರ್ಣ ಜವಾಬ್ದಾರಿಯು ಭೂ ಮಾಲೀಕರ /ಅಭಿವೃದ್ಧಿ ದಾರರದ್ದೇ ಆಗಿರುತ್ತದೆ.

25) ಗ್ರಾಮ ಪಂಚಾಯತಿ ಕಾರ್ಯಾಲಯವು ಕಾಲ ಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

K.N. Savitha

ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು.

ರವರಿಗೆ

**ಶ್ರೀ ಸತೀಶ್ ಕೋಶಿ**

ಮೆ. ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ ಪರವಾಗಿ

(Formerly known as Tumkur Nivas LLP)

ನಂ.5 ಎ ಸಿ–712, 5 ನೇ ಅಡ್ಡರಸ್ತೆ , ಮೊದಲನೇ ಬ್ಲಾಕ್

ಹೆಚ್ ಆರ್ ಬಿ ಆರ್ ಲೇಔಟ್, ಕಲ್ಯಾಣ ನಗರ ಪೋಸ್ಟ್

ಬೆಂಗಳೂರು 560043.

ಪ್ರತಿಯನ್ನು :

1) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕೋಲಾರ ರವರ ಸೂಕ್ತ ಮಾಹಿತಿಗಾಗಿ ಸಲ್ಲಿಸಿದೆ.

2) ಕಛೇರಿ ಪ್ರತಿ.